ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 3ನೆ ಆಗಸ್ಟ್ 1904.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯುವಡಿಸುವದೇನಂದರೆ—ಇದರಡಿ ನಮೂದಾಗಿ ಇರುವ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಪ್ಲಾಂಟೇಷನ್‌ಗಳ ಹುಲ್ಲನ್ನು 1905ನೆ ಇಸವಿ ಮಾರ್ಚ್ ಆಖೈರು ವರೆಗೆ ಕಾಯಿದು ಸಾಸಿಕೊಳ್ಳುವ ಹಕ್ಕನ್ನು ಸದರೀ ಪ್ಲಾಂಟೇಷನ್‌ಗಳ ಬಾಜೂದಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಲಾಗಲಿ ರೇಂಜು ಫಾರೆಸ್ಟ್ ಆಫಿಸರವರಿಂದಲಾಗಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ತಾಲ್ಲೂಕು.	ಪ್ಲಾಂಟೇಷನ್‌ಗಳ ಹೆಸರು	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.	ಹರಾಜು ಮಾಡುವ ಆಫಿಸರ ಹೆಸರು.
ಬೆಂಗಳೂರು	... ಬುಕ್ಕಸಂದ್ರ ...	48	27—8—1904	ಬೆಂಗಳೂರು	ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು.
	ಒಪ್ಪಿ ಹಬ್ಬಳ್ಳಿ ...	100	ಡಿಟೋ		
	ಕೆಂಚನಹಳ್ಳಿ	77	ಡಿಟೋ		
ನೆಲಮಂಗಲ	... ಮಾಚೋಹಳ್ಳಿ ...	270	ಡಿಟೋ		
ಬೆಂಗಳೂರು	... ಮಲ್ಲತ್ತಹಳ್ಳಿ ..	255	ಡಿಟೋ		
	ನಾಗರಭಾವಿ	250	ಡಿಟೋ		
ನೆಲಮಂಗಲ	... ಕೃಷ್ಣರಾಜಪುರ	423	29—8—1904	ನೆಲಮಂಗಲ	
	ಮಾವಿನಕೋವನಹಳ್ಳಿ ...	435	ಡಿಟೋ		
	ಗೋವಿಂದಪುರ ...	48	ಡಿಟೋ		
	ಕಲ್ಲುಪಾಳ್ಯ	106	ಡಿಟೋ		
	ಕೆಂಚನಪುರ	535	ಡಿಟೋ		
	ಒಳಗೆರೆ	400	ಡಿಟೋ		
	ಬೈರಕೆಪ್ಪಹಳ್ಳಿ (ಗೊಲ್ಲಹಳ್ಳಿ)	86	ಡಿಟೋ		
	ಬೊಮ್ಮೇನಹಳ್ಳಿ ...	174	ಡಿಟೋ		
	ಜಕ್ಕಸಂದ್ರ ..	230	ಡಿಟೋ		
ಹೊಸಕೋಟೆ	... ಕಳೇಜಾಗೇನಹಳ್ಳಿ ...	455	31—8—1904	ಕಾಡಗೋಡಿ	
	ನಲ್ಲಾಲ ಎ. ಬಿ ..	734	ಡಿಟೋ		
	ಡಿಟೋ ಬಿ.	486	ಡಿಟೋ		
	ಅಪ್ಪಸಂದ್ರ	54	ಡಿಟೋ		
ಆನೇಕಲ್ಲು	... ಕಾಡುಬಾರನಹಳ್ಳಿ	135½	27—8—1904	ಬೆಂಗಳೂರು	
	ಕಂನವಾನಹಳ್ಳಿ . .	...	ಡಿಟೋ		

ಷರಾ—1. ಹರಾಜು ಖೈವಾಡ ಕೂಡ್ಲೆ ಖರೀದಿದಾರನು ¼ ಹಿಸ್ಸೆ ಮೊಬಲಗನ್ನು ಕಟ್ಟಬೇಕು. ಉಳಿದ ಮುಕ್ತಾಲು ಹಿಸ್ಸೆಯನ್ನು ಖರೀದಿ ತಾರೀಖು ಲಾಗಾಯಿತು 7 ದಿವಸಗಳ ಒಳಗಾಗಿ ಕಟ್ಟಬೇಕು. ಇದಕ್ಕೆ ತಪ್ಪಿದಲ್ಲಿ ಡಿವಾಜಿಟ್ ಮೊಬಲಗನ್ನು ಸರ್ಕಾರಕ್ಕೆ ಜೀರಿಸಿಕೊಳ್ಳುವದಲ್ಲದೆ ಹುಲ್ಲನ್ನು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಆವಲ್ ಖರೀದಿದಾರನನ್ನು ಗುರಿ ಮಾಡಲಾಗುತ್ತೆ. ಏನಾದರೂ ಹೆಚ್ಚು ಉತ್ಪತ್ತಿ ಆದಲ್ಲಿ ಅವಲ್ ಖರೀದಿದಾರನು ಯಾವನಿಧದಲ್ಲೂ ಭಾಗಿಯಾಗುವದಿಲ್ಲ. ಪೂರ್ತಿಹಣ ಪಾವತಿ ಮಾಡಿದಕೂಡಲೆ ಹುಲ್ಲು ಕುಯ್ಯುವದಕ್ಕೆ ಲೈಸೆನ್ಸು ಕೊಡಲ್ಪಡುತ್ತೆ.

3. ಪ್ಲಾಂಟೇಷನ್ನಲ್ಲಿ ಹರಾಜುದಾರನ ಅಜಾಗ್ರತೆಯಿಂದ ಬೆಂಕಿ ಪೈರೆ ಸಂಭವಿಸಿದಲ್ಲಿ ಖರೀದಿದಾರನು ಜವಾಬ್ದಾರನಾಗಿರುತ್ತಾನೆ. ಖರೀದಿದಾರನಿಂದಲಾಗಲಿ ಅವನ ಕಡೆ ಜನಗಳಿಂದಲಾಗಲೀ ಏನಾದರೂ ಫಾರೆಸ್ಟ್ ತಕ್ಕೀರು ನಷ್ಟದಲ್ಲಿ ಫಾರೆಸ್ಟ್ ರೆಗ್ಯುಲೇಷನ್ ರೀತ್ಯಾ ಶಿಕ್ಷೆಗೆ ಗುರಿಮಾಡಲ್ಪಡುವನು.

4. ಮೇಲಿನ ಪ್ಲಾಂಟೇಷನ್‌ಗಳ ಹುಲ್ಲನ್ನು ಹಗಲಿನಲ್ಲಿ ಹರಾಜು ಮಂಜೂರಾದ ಅಂದರೆ ಲೈಸೆನ್ಸು ಕೊಟ್ಟ ತಾರೀಖು ಲಾಗಾಯಿತು 1905ನೆ ಮಾರ್ಚ್ 31ನೆ ತಾರೀಖು ವರಿವಿಗೂ ತೆಗದುಕೊಳ್ಳಬಹುದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

34

1297

ತಾರೀಖು 1ನೆ ಆಗಸ್ಟು 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ಡಿಪೋದಲ್ಲಿ ಜಮಾಯಿಸಿ ಇರುವ ಪಸಾರೆ ಬಾಬುಗಳು ಕೊಂಡುಕೊಳ್ಳುವ ಬಗ್ಯ 1904ನೆ ಇಸವಿ ಸೆಪ್ಟಂಬರ್ 3ರ ವರಿಗೆ ಹಾಸನ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರ ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು:—

ಡಿಪೋ ಹೆಸರು.	ಬಾಬಿನ ತರಹಾ.	ಮೊತ್ತ ಹೆಚ್ಚು ಕಡಿಮೆ.
ಅರಸೀಕೆರೆ	ಅಳಲೇಕಾಯಿ. ..	3,000 ಮಣ.

2. ಡಿಪೋ ಹೆಸರು, ಬಾಬಿನ ತರಹಾ, ಕೇಳುವ ದರಖಾಸ್ತುಗಳಲ್ಲಿ ನಮೂದಿಸಬೇಕು.

3. ಪ್ರತಿ ಒಂದು ದರಖಾಸ್ತಿನ ಜೊತೆಗೆ ಐವತ್ತು ರೂಪಾಯಿನ ಕರೆನ್ಸಿ ನೋಟು ತೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರಿ ಮತ್ತು ಇನ್‌ಷೂರ್ ಮಾಡಿ ಲಿಫಾಪೇ ಮೇಲೆ "ಪಸಾರೆ ಬಾಬುಗಳು ಕೊಂಡುಕೊಳ್ಳುವ ಬಗ್ಯೆ ದರಖಾಸ್ತು" ಎಂದು ಬರದು ಹಾಸನ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರ ವಿಳಾಸಕ್ಕೆ ರವಾನಿಸಬೇಕು.

4. ದರಖಾಸ್ತುಗಳು ಆಬ್ಜೆರ್ ಮಂಜೂರಾತಿಯು ಡಿಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡಿಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

5. ಹಾಸನ ಡಿಸ್ಟ್ರಿಕ್ಟ ಫಾರೆಸ್ಟು ಆಫೀಸಿನಲ್ಲಿ 1904ನೆ ಸೆಪ್ಟಂಬರ್ 5ನೆ ತಾರೀಖು 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ ಫಾರೆಸ್ಟು ಆಫೀಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಬಿಡಿಸುವರು.

6. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 5 ದಿವಸಗಳ ಒಳಗಾಗಿ ಅವನು ಕೇಕಡ 25 ರೂಪಾಯಿನಂತೆ ಆಗುವ ಮೊಬಲಗು ಸಮಿಪವಾದ ಮೈಸೂರು ಗವರ್ನಮೆಂಟ್ ಖಜಾನೆಯಲ್ಲಿ ತೇವಣಿ ಇಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದು ಮಾಡಿ ಅಡ್ವಾನ್ಸು ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ.

7. ಖರೀದಿ ಒಟ್ಟು ಮೊಬಲಗು 1904ನೆ ಸೆಪ್ಟಂಬರ್ 30ನೆ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚೆಯಾಗಲಿ ಪಾವತಿಮಾಡಿ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು ಒಂದು ತಿಂಗಳ ಒಳಗಾಗಿ ಮಾಲನ್ನು ಸಾಗಿಸಬೇಕು. ಖರೀದಿಯ ಪೂರಾ ಮೊಬಲಗನ್ನು ಪಾಯಿದೆ ಒಳಗಾಗಿ ಪಾವತಿ ಮಾಡಲು ತಪ್ಪಿದಲ್ಲಿ ಪಸಾರೆ ಖಾಖು ಪುನಹಾ ಮೂರಲ್ಪಡುವದು. ದರಖಾಸ್ತುದಾರನಿಗೆ ಹರಾಜಿನಲ್ಲಿ ಸಂಭವಿಸುವ ಫಾಯಿದೆ ದೊರಿಯುವಾರದು. ಆದರೆ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಬದ್ಧನನ್ನಾಗಿ ಮಾಡಿ ನಷ್ಟದ ಮೊಬಲಗನ್ನ ರವಿನ್ಯೂ ರೂಲ್ಸು ಪ್ರಕಾರ ಅವನಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು. ಮಾಲನ್ನು ವಾಯಿದೆ ಒಳಗೆ ಸಾಗಿಸದೇ ಹೋದ ಪಕ್ಷದಲ್ಲಿ ತಿಂಗಳು ಒಂದಕ್ಕೆ ಅಥವಾ ಕಮ್ಮಿ ದಿವಸಗಳಿಗೂನೂ ಮಣ ಒಂದಕ್ಕೆ ದರ ಮಹಿ ಮೂರು ಕಾಸಿನಂತೆ ಡಿಪೋ ಬಾಡಿಗೆ ದರಕಾಸ್ತುದಾರನು ಕೊಡಬೇಕಾದೀತು. ಈ ಭಾಗದಲ್ಲಿ ಹೆಚ್ಚಾದ ತಪಶೀಲ್ ಬೇಕಾದಲ್ಲಿ ಅರಸೀಕೆರೆ ರೇಂಜ್ ಫಾರೆಸ್ಟು ಆಫೀಸರಿಂದಲಾಗಲಿ ಅಥವಾ ಹಾಸನ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಾಗಲಿ ತಿಳಿದುಕೊಳ್ಳಬಹುದು.

8. ಅರಸೀಕೆರೆ ರೇಂಜ್ ಫಾರೆಸ್ಟು ಆಫೀಸರವರಲ್ಲಿಗೆ ಒಂದು ರೂಪಾಯಿ ಕಳುಹಿಸಿಕೊಟ್ಟಲ್ಲಿ ಪಸಾರೆ ಬಾಬಿನ ಮಾದ್ರಿಯು ದೊರಕುವದು. ಅಥವಾ ರೂಬರೂಬು ನೋಡ್ಕಂಡ ಸ್ಥಳದಲ್ಲಿ ಮುಫತ್ತಾಗಿ ನೋಡಬಹುದು.

9. ದರಖಾಸ್ತು ಮಂಜೂರಾತಿಯನ್ನು ಸದರಿ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ತೇವಣೀ ಮೊಬಲಗು ವಾಪಸು ಮಾಡಲ್ಪಡುವದು.

10. ಫಾರೆಸ್ಟು ನೌಕರಮಾನೇರಿಗೂ ಮತ್ತು ಖರೀದಿದಾರರಿಗೂ ಉಂಟಾಗುವ ತಕರಾರುಗಳಲ್ಲಿ (ವ್ಯತ್ಯಾಸಗಳಲ್ಲಿ) ಡಿಪ್ಯುಟಿ ಕಮಿಷರ್ಸರವರ ತೀರ್ಮಾನವು ಆಬ್ಜೆರಾದ್ದಾಗಿರುತ್ತೆ.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಹಾಸನದ ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 6ನೆ ಆಗಸ್ಟು 1904.

1904ನೆ ಇಸವಿ ಆಗಸ್ಟು 4ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ 459ನೆ ಪಾರ್ಜಿನಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು 1904—05ನೆ ಸಾಲಿನ ತಂಗಡಿ ಮತ್ತು ಕೆಕ್ಕೆ ಜಕ್ಕೆ ಹರಾಜು ವಿಚಾರ ನೋಟಿಫಿಕೇಷನ್ ಫಾಯಿಷ್ ಮಾಡಿರುವ ವಿಷಯು ಎಲ್ಲಾ ಜನಗಳು ತಿಳಿಯತಕ್ಕದ್ದು.

ಜೆ. ಮಾರ್ಟಿರೋ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರನಾಮೆ

ತಾರೀಖು 10ನೆ ಆಗಸ್ಟ್ 1904.

ಬೇವಿನಹಳ್ಳಿ ಫಾರೆಸ್ಟ್ಟು, ಚಿತ್ರದುರ್ಗ ಡಿಸ್ಟ್ರಿಕ್ಟ್ಟು.

ಸ್ ಈ 1900ನೆ ಇಸವಿಯ XIನೆ ನಂಬರ್ ಫಾರೆಸ್ಟ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗೌರ್ನಮೆಂಟಿನಿಂದ ವಿವರಿಸಲ್ಪಟ್ಟ ಜಕ್ಕು ಬಂದಿಯುಳ್ಳ ಪ್ರದೇಶವು ನಂಬರು 890—9907 ತಾರೀಖು 27—2-6-04ನೆ ಮೈ 1904ನೆ ಇಸವಿಯ ಗೆಜೆಟ್ಟಿನಲ್ಲಿ ಘಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ಡಿ ಸ್ಕ್ವೇರ್ ಮೈಲ್.	ಬ್ಲಾಕಿನ ಹೆಸರು.	ಜಕ್ಕು ಬಂದಿ.
ಚಿತ್ರದುರ್ಗ.	ಚಿತ್ರದುರ್ಗ, ಹಾನಗಲ್ಲಿ ಮತ್ತು ಜಗಳೂರು ತಾಲ್ಲೂಕುಗಳು.	3,397 ಎಕರೆ ಯೂ 5·197 ಚದರ ಮೈಲುಗಳು.	ಬೇವಿನಹಳ್ಳಿ	ಸ್ಥಳ.—ಹುಣಸಕಟ್ಟೆ ಸಮೀಪದಲ್ಲಿ ಭರ್ಮಸಾಗರ ವ ಹಾನಗಲ್ಲಿ ರಸ್ತೆಯ ಉತ್ತರಕ್ಕೂ ಮತ್ತೂ ಜಗಳೂರು ತಾಲ್ಲೂಕಿನಲ್ಲಿರುವ ಹಾಲೇಕಾಲ್ ವ ಕರಿಅಗ್ಗಲಹಳ್ಳಿ ಗ್ರಾಮಗಳ ದಕ್ಷಿಣಕ್ಕೂ ಇರುವ ಜಮೀನಿನ ತುಂಡು. **ಜಕ್ಕು ಬಂದಿ.** ಉತ್ತರಕ್ಕೆ.—ಗುಡಾಳಿನ ಸರ್ವೆ ನಂ. 103ರ ನೈರುತ್ಯ ಮೂಲೆಯಿಂದ ಹೊರಟು ಲೈನು ಅದೇ ಸರ್ವೆ ನಂಬರಿನ ನೈರುತ್ಯ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಹಾಲೇಕಲ್ಲಿನ ಸರ್ವೆ ನಂ. 74ರ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 72ರ ದಕ್ಷಿಣ, ಪಶ್ಚಿಮ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 69ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 69, 68 ವ 67 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಲಿಂಗೇನಹಳ್ಳಿಯ ಗ್ರಾಮ ಎಲ್ಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಲಿಂಗೇನಹಳ್ಳಿ ಗ್ರಾಮವ ಪಶ್ಚಿಮ ಎಲ್ಲೆಯ ಉದ್ದಕ್ಕೂ ಬಹದೂರು ಗಟ್ಟೆಯ ಸರ್ವೆ ನಂ. 44ರ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 41ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 40, 39 ವ 38 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂಬರಿನ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 37 ವ 36 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 34ರ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 33ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಹೆಮ್ಮಿನಗಟ್ಟೆಯ ಸರ್ವೆ ನಂ. 54ರ ವಾಯವ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಸರ್ವೆ ನಂ. 54, 53, 50 ವ 51 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ನಂದಿಹಳ್ಳಿಯ

313

1299

ಷೆಡ್ಯೂಲ್.

ಜಿಲ್ಲೆಯು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಜಕ್ಕುಬಂದಿ.
ಚಿತ್ರದುರ್ಗ.	ಚಿತ್ರದುರ್ಗ, ಧಾವಣಗೆರೆ ಮತ್ತು ಜಗಳೂರು ತಾಲ್ಲೂಕುಗಳು.	3,397 ಎಕರೆ ಯಾ 5·197 ಚದರ ಮೈಲುಗಳು.	ಬೇವಿನಹಳ್ಳಿ.	ಸರ್ವೆ ನಂ. 51ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ. ತರುವಾಯ ಆಗ್ನೇಯ ದಿಕ್ಕಾಗಿ ಸುಮಾರು $2\frac{1}{2}$ ಫರ್ಲಾಂಗುಗಳ ದೂರಕ್ಕೆ ಸರ್ವೆ ನಂ. 49ರ ಮಧ್ಯೆ ಅದರ ಆಗ್ನೇಯ ಮೂಲೆಯಿಂದ ಸುಮಾರು 1 ಫರ್ಲಾಂಗಿನ ದೂರ ಅದೇ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ಆಮೇಲೆ ದಕ್ಷಿಣ ಮತ್ತು ನೈರುತ್ಯ ದಿಕ್ಕಾಗಿ ಅರಸೂರಿನ ಸರ್ವೆ ನಂ. 40ರ ಮಧ್ಯೆ ಅದೇ ಸರ್ವೆ ನಂಬರಿನಲ್ಲಿರುವ ಕೆರೆಯನ್ನು ಬಿಟ್ಟು ಸುಮಾರು 5 ಫರ್ಲಾಂಗುಗಳ ದೂರಕ್ಕೆ ಹೋಗುತ್ತದೆ. ಮತ್ತು ಅದೇ ದಿಕ್ಕಾಗಿ ಬೇವಿನಹಳ್ಳಿಯ ಸರ್ವೆ ನಂ. 60ರ ಮಧ್ಯೆ ಸರ್ವೆ ನಂ. 57ರ ವಾಯವ್ಯ ಮೂಲೆಗೆ ಸುಮಾರು $2\frac{1}{4}$ ಫರ್ಲಾಂಗುಗಳ ದೂರ ಹೋಗುತ್ತದೆ. ತರುವಾಯ ಸರ್ವೆ ನಂ. 57, 58, ಮತ್ತ 59 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಖೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಯಮ್ಮೆಹಳ್ಳಿಯ ಸರ್ವೆ ನಂ. 13 ಮತ್ತ 12 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ತರುವಾಯ ವಾಯವ್ಯ ದಿಕ್ಕಾಗಿ ಸುಮಾರು $1\frac{1}{4}$ ಫರ್ಲಾಂಗುಗಳ ದೂರಕ್ಕೆ ಹುಣಸೆಕಟ್ಟೆಯ ಸರ್ವೆ ನಂ. 59ರ ಮಧ್ಯೆ ಸರ್ವೆ ನಂ. 56ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಮತ್ತು ಮಂಡೊರಿನ ಸರ್ವೆ ನಂ. 75, 76 ಮತ್ತ 77 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ವಾಯವ್ಯ ದಿಕ್ಕಾಗಿ ಸುಮಾರು 2 ಫರ್ಲಾಂಗುಗಳ ದೂರ ಸರ್ವೆ ನಂ. 67 ಮತ್ತ 66 ಇವುಗಳ ಮಧ್ಯೆ ಆಖೈರ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಕಾಟೆಹಳ್ಳಿಯ ಸರ್ವೆ ನಂ. 21ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ವಾಯವ್ಯ ದಿಕ್ಕಾಗಿ ಸರ್ವೆ ನಂ. 22ರ ಮಧ್ಯೆ ಸುಮಾರು $2\frac{1}{4}$ ಫರ್ಲಾಂಗುಗಳ ದೂರಕ್ಕೆ ಹೋಗುತ್ತದೆ. ಆಮೇಲೆ ಅದೇ ದಿಕ್ಕಾಗಿ ಸುಮಾರು 2 ಫರ್ಲಾಂಗುಗಳ ದೂರ ಸರ್ವೆ 17ರ ಮಧ್ಯೆ ಅದರ ಅತ್ಯಂತ ಉತ್ತರ ಮೂಲೆಗೆ ಹೋಗುತ್ತದೆ. ತರುವಾಯ ಗುಮ್ಮನೂರಿನ ಸರ್ವೆ ನಂ. 84, 85, 88, 70 ಮತ್ತ 71 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 73 (ಸೇರಿದ) ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಉತ್ತರ ದಿಕ್ಕಾಗಿ ಸುಮಾರು 1 ಫರ್ಲಾಂಗಿನ ದೂರ ಸರ್ವೆ ನಂ. 79ರ ಮಧ್ಯೆ ಮತ್ತು ಸುಮಾರು 3 ಫರ್ಲಾಂಗುಗಳ ದೂರ ಗುಡಿಹಾಳಿನ ಸರ್ವೆ ನಂ. 105ರ ಮಧ್ಯೆ ಸರ್ವೆ ನಂ. 106ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಈಶಾನ್ಯ ದಿಕ್ಕಾಗಿ ಸುಮಾರು $1\frac{1}{4}$ ಫರ್ಲಾಂಗಿನ ದೂರ ಸರ್ವೆ ನಂ. 105ರ ಮಧ್ಯೆ ಸರ್ವೆ ನಂ. 102ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರಿನ ಪೂರ್ವ ದಿಕ್ಕಾಗಿ ಹೊರಟು ಸ್ಥಳಕ್ಕೆ ಹೋಗುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟು ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾವು ಪ್ರಕಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಕಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀ ಹಕ್ಕಿನಿಂದಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಕಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರೀಗೋಸ್ಕರ ಗಿಡಗಳ್ಳಾವದನ್ನೂ ಕಡಿಯಕೂಡದು. ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟು ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮಪ್ರವೇಶ, ದನಕರುಗಳನ್ನು ಮೇಯಿಸುವದು, ದನಕರುಗಳನ್ನು ಸ್ಟೇಟು ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯಕೂಡದು, ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಭೂಮಿದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು, ನೀರಿನಲ್ಲಿ ಡೈನಾಮಿಟ್ ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲಗಳನ್ನು ಹಾಕುವದು, ಇವುಗಳೆಲ್ಲಾ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಗಳಾಗಿವೆ. ಮತ್ತು ಸದರೀ ಸ್ಟೇಟು ಫಾರೆಸ್ಟಿನಲ್ಲಿ ಇದರಹೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳ ಸಜಾ, ಅಥವಾ 500 ರೂಪಾಯಿಗಳ ಜುಲ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(d) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(e) ಜಂಗಲಿಗ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟು ಫಾರೆಸ್ಟಿಗೆ ಬಾಧಕವಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(f) ಈ ಬಗ್ಗೆಗಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ಜಗದುಕೊಂಡು ಹೋಗುವದು.

(g) ಯಾವ ಗಿಡವನ್ನಾಗಲಿ ಕಡಿಯುವದು, (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಫಾಯು ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(h) ಬಂಡೆಯಿಂದ ಕಲ್ಲು ತೆಗೆಯುವದು, ಸುಣ್ಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು, ಅಥವಾ ಸಾಗಿಸುವದು.

(i) ಸಾಗುವಳೀಗಾಗಲಿ, ಅಥವಾ ಇನ್ನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಕಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರುತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು, ಅಂಥಾ ಪ್ರತಿ ಬಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹವೂಲಕವಾಗಲೀ, ಅಥವಾ ರೂಬರೂಬಾಗಲೀ, ತಿಳಿಯಪಡಿಸಬೇಕಲ್ಲದೆ ಪಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಹಾಜರ್‌ಮಾಡಬೇಕು.

ಅ. ಆನಂದರಾವ್,
ಮೈಸೂರು ಕೀಮೆಯ ಫಾರೆಸ್ಟು ಸೆಟಲ್‌ಮೆಂಟ್ ಆಫಿಸರು.

ಬೆಂಗಳೂರ ಡಿಸ್ಟ್ರಿಕ್ಟು.
ಪ್ರಕಿದ್ಧಪತ್ರಿಕೆ.

ಹೊಸಕೋಟೆ ತಾಲ್ಲೂಕು ವಾಗಟು ಹೋಬಳಿ ಜೋಡಿ ಏಮನಹಳ್ಳಿ ಗ್ರಾಮವು ಕಂದಾಯದ ಬಾಕಿಗೋಸ್ಕರ ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ 1904ನೆ ಆಗಸ್ಟು 29ನೆ ಪೂರ್ವಾನ್ಹ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ.

ಹರಾಜು ಸ್ವತ್ತಿನ ಷರತ್ತು ಮತ್ತು ಹರಾಜ್ ಪರತ್ತುಗಳು 1904ನೆ ಆಗಸ್ಟು ಮಾಹೆಯ 4ನೆ ಮಂಗಳವಾರ ಮೈಸೂರು ಗೆಜೆಟ್ಟಿನ ಎರಡನೆ ಭಾಗದ 461ನೆ ಪುಟದಲ್ಲಿ ಫಾಯಿಷಾಗಿರುತ್ತೆ.

ಬಿ. ಜೆ. ಕುಮಾರಸಾಮಿ ನಾಯಿಕ್,
ಫಾರ್ ಡೆಪ್ಯುಟಿ ಕಮಿಷನರ್.